ಪಿ.ಡಬ್ಲ್ಯು:1

**ಸಾಕ್ಷಿಯನ್ನು ಕರೆಯಿಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ 06.07.2026.**

**ಮುಂದುವರೆದ ಪಾಟೀ ಸವಾಲು : ಶ್ರೀ. ಎಸ್.ಪಿ.ವಿ. ಆರೋಪಿ ಪರ ವಕೀಲರಿಂದ**

ನನ್ನ ಬಳಿ ಹಣ ಕಡಿಮೆ ಇದ್ದಾಗ ನನ್ನ ಚಿಕ್ಕಪ್ಪ ಶಶಿಧರ ದಿಃ 17.02.2024 ರಂದು ರೂ.4 ಲಕ್ಷ ಹಣವನ್ನು ನೀಡಿದ್ದರು. ಸದರಿ ಹಣವನ್ನು ನನಗೆ ಶಶಿಧರ ರವರು ನಗದು ಮೂಲಕ ನೀಡಿದ್ದರು. ಶಶಿಧರ ರವರ ಮನೆಗೆ ಹೋಗಿ ಹಣವನ್ನು ಪಡೆದುಬಂದಿದ್ದೆ. ಶಶಿಧರ ರವರು ನಾನು ಅವರಿಗೆ ನೀಡಿದ ಕೊಬ್ಬರಿಯನ್ನು ಬೇರೆಯವರಿಗೆ ಮಾರಾಟ ಮಾಡಿ ನನಗೆ ಹಣ ನೀಡಿದರು. ಅವರು ಕೊಬ್ಬರಿ ಮಾರಾಟ ಮಾಡಿದ ಬಗ್ಗೆ ದಾಖಲೆಗಳನ್ನು ತೋರಿಸಲಿಲ್ಲ.

ನನಗೆ ಒಬ್ಬ ಮಗಳಿದ್ದಾಳೆ. ಆಕೆ ಮದುವೆಯಾಗಿ ವೈವಾಹಿಕ ಕುಟುಂಬದಲ್ಲಿ ವಾಸವಾಗಿದ್ದಾರೆ. ನನ್ನ ಮಗಳು ಸಿಂಗಟಗೆರೆ ಶ್ರೀ. ಕಲ್ಲೇಶ್ವರ ಪದವಿ ಕಾಲೇಜಿನಲ್ಲಿ ವ್ಯಾಸಾಂಗ ಮಾಡಿದ್ದಾರೆ. ಸದರಿ ಕಾಲೇಜು ಸರ್ಕಾರದ ಅನುದಾನಕ್ಕೆ ಒಳಪಟ್ಟಿದೆ ಎಂದರೆ ಸರಿಯಲ್ಲ.

ನಾನು ಎಪಿಎಲ್ ಪಡಿತರ ಚೀಟಿ ಹೊಂದಿದ್ದೇನೆ. ಆರೋಪಿಯು ದಿಃ 19.04.2024 ರಂದು ನಿಪಿ-1 ಚೆಕ್ಕನ್ನು ನನಗೆ ನೀಡಿದ್ದಾರೆ. ಆರೋಪಿಯು ಒಬ್ಬರೆ ಬಂದು ಚೆಕ್ಕನ್ನು ನೀಡಿದ್ದಾರೆ. ನಾನು ಪಿಯುಸಿ ವರೆಗೆ ವ್ಯಾಸಾಂಗ ಮಾಡಿದ್ದೇನೆ. ನಿಪಿ-1 ಚೆಕ್ಕಿನಲ್ಲಿ ಇರುವ ಸಹಿ ಕನ್ನಡದಲ್ಲಿ ಬರೆದಿದ್ದು, ಉಳಿದ ವಿವರಗಳು ಆಂಗ್ಲ ಭಾಷೆಯಲ್ಲಿ

ಬರೆಯಲಾಗಿದೆ ಎಂದರೆ ಆರೋಪಿಯು ಈಗಾಗಲೆ ಬರೆದಿದ್ದ ಚೆಕ್ಕನ್ನು ನನಗೆ ನೀಡಿದ್ದರು ಎಂದು ನುಡಿಯುತ್ತಾರೆ. ಸಹಿ ಮತ್ತು ಇತರೇ ಬರವಣಿಗೆಗಳು ಬೇರೆ ಬೇರೆ ಶಾಹಿಯಿಂದ ಬರೆಯಲಾಗಿದೆ ಎಂದರೆ ಗೊತ್ತಿಲ್ಲ.

ನಿಪಿ-1 ಚೆಕ್ಕಿನಲ್ಲಿ ದಿಃ 19.04.2024 ಎಂದು ಬರೆದಿದೆ ಎಂದರೆ ಸರಿ. ದಿಃ 19.04.2024 ರಂದು ಬೆಳಗ್ಗೆ 9.00 ಗಂಟೆಯಲ್ಲಿ ಆರೋಪಿಯು ಚೆಕ್ಕನ್ನು ನನ್ನ ಮನೆಗೆ ಬಂದು ನೀಡಿದರು. ನಿಪಿ-2 ಹಿಂಬರಹವು ದಿಃ 19.04.2023 ಕ್ಕೆ ಸಂಬಂಧಿಸಿದೆ ಎಂದರೆ ಸರಿ. ನಿಪಿ-1 ಚೆಕ್ಕಿಗೆ ಸಂಬಂಧಿಸಿದ ನಿಪಿ-2 ರಂತೆ ದಿಃ 19.04.2023 ರಲ್ಲಿ ಹಿಂಬರಹ ನೀಡಲಾಗಿದೆ ಎಂದರೆ ಸರಿ.

ನಾನು ನಿಪಿ-1 ಚೆಕ್ಕನ್ನು ನಾನು 2023 ರಲ್ಲಿ ಸಿಂಗಟಗೆರೆ ಎಸ್.ಬಿ.ಐ ಬ್ಯಾಂಕಿಗೆ ಹಾಜರುಪಡಿಸಿದ್ದೆ. ಆ ನಂತರ ಖಾತೆಯಲ್ಲಿ ಹಣವಿಲ್ಲವೆಂದು ಬ್ಯಾಂಕಿನವರು ಹಿಂಬರಹ ನೀಡಿದ್ದರು. ನಾನು ನಿಪಿ-1 ಚೆಕ್ಕನ್ನು ದಿನಾಂಕ 19.04.2024 ಕ್ಕಿಂತ ಮುಂಚೆ ಅಂದರೆ ದಿಃ 19.04.2023 ರಲ್ಲಿ ಒಮ್ಮೆ ನಗಧೀಕರಣಕ್ಕಾಗಿ ಹಾಜರುಪಡಿಸಿದ್ದೆ. ದಿಃ 19.04.2023 ರಲ್ಲಿ ಹಾಜರುಪಡಿಸಿದ ಚೆಕ್ಕು ನಿಪಿ-1 ಆಗಿರುತ್ತದೆ. ದಿಃ 19.04.2023 ರಲ್ಲಿ ಪಡೆದ ಹಿಂಬರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ದಿಃ 19.04.2023 ರಲ್ಲಿ ನಿಪಿ-1 ಚೆಕ್ಕನ್ನು ಬ್ಯಾಂಕಿಗೆ ಹಾಜರುಪಡಿಸಿದ್ದೆ ಎಂದು ದಿಃ 19.04.2024 ರಂದು ಆರೋಪಿಗೆ

ನೀಡಿದ ನೋಟಿಸಿನಲ್ಲಿ ತಿಳಿಸಿಲ್ಲ. ಸದರಿ ವಿಚಾರವನ್ನು ಫಿರ್ಯಾದು ಮತ್ತು ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ತಿಳಿಸಿಲ್ಲ.

ನಾನು ಆರೋಪಿಗೆ 5 ಲಕ್ಷ ಹಣವನ್ನು ನೀಡಲು ಆರ್ಥಿಕವಾಗಿ ಚೇತನ ಹೊಂದಿರಲಿಲ್ಲ ಎಂದರೆ ಸರಿಯಲ್ಲ. ದಿಃ 19.02.2024 ರಂದು ಆರೋಪಿಯು ನನ್ನಿಂದ 5 ಲಕ್ಷ ಹಣವನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ನಿಪಿ-1 ಚೆಕ್ಕು ಮತ್ತು ನಿಪಿ-2 ಹಿಂಬರಹಕ್ಕೆ ತಾಳೆ ಹೊಂದಿಲ್ಲ ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಿಃ 19.02.2024 ರಂದು ಆರೋಪಿ ಮತ್ತು ನನ್ನ ನಡುವೆ ಯಾವುದೇ ಹಣಕಾಸಿನ ವ್ಯವಹಾರವಾಗಿಲ್ಲ ಎಂದರೆ ಸರಿಯಲ್ಲ. ಆರೋಪಿಯು 2020-21 ರಲ್ಲಿ ನನ್ನ ಬಳಿ ಹಣ ಪಡೆದ ಸಂಬಂಧ ಭದ್ರತೆಗಾಗಿ ನೀಡಿದ ನಿಪಿ-1 ಚೆಕ್ಕನ್ನು ನಾನು ದುರುಪಯೋಗ ಪಡಿಸಿಕೊಂಡು ಈ ಸುಳ್ಳು ಪ್ರಕರಣ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. 2020-21 ರಲ್ಲಿ ಆರೋಪಿ ನನ್ನಿಂದ ಪಡೆದ ಹಣವನ್ನು ಆರೋಪಿಯು ತನ್ನ ಹೆಂಡತಿಯ ಮಾವನ ಮಗನಾದ ವಿಜಯ ಕುಮಾರ್ ಮತ್ತು ಮಂಜುನಾಥ ರವರ ಮೂಲಕ ಫೋನ್ ಪೇ ಮೂಲಕ ನನಗೆ ಹಣವನ್ನು ಮರುಪಾವತಿ ಮಾಡಿದ್ದಾರೆ ಎಂದರೆ ಸಾಕ್ಷಿಯು ಮಂಜುನಾಥ ಮತ್ತು ವಿಜಯ ಕುಮಾರ್ ಮೂಲಕ ನನ್ನ ಖಾತೆಗೆ ಬಂದ ಹಣವನ್ನು ಆರೋಪಿಯು ನಗದು ಮೂಲಕ ನನ್ನಿಂದ ಪಡೆದರು ಎಂದು ನುಡಿಯುತ್ತಾರೆ. ಆ ರೀತಿ ನಾನು ಮಂಜುನಾಥ ಮತ್ತು ವಿಜಯ ಕುಮಾರ್ ನೀಡಿದ ಹಣವನ್ನು ನಗದಾಗಿ ಆರೋಪಿಗೆ ನೀಡಿದ್ದೆ ಎಂದು ಫಿರ್ಯಾದಿಯಲ್ಲಿ ತಿಳಿಸಿಲ್ಲ ಮತ್ತು ಆ ರೀತಿ ತಿಳಿಸಲು ತೊಂದರೆ ಇರಲಿಲ್ಲ. 2023 ರಲ್ಲಿ ಆರೋಪಿಯು 2020-21 ನೇ

ಸಾಲಿನಲ್ಲಿ ನನ್ನಿಂದ ಪಡೆದ ಹಣವನ್ನು ಮರು ಪಾವತಿಸಿದ್ದು, ಆ ಸಮಯದಲ್ಲಿ ಭದ್ರತೆಗಾಗಿ ನೀಡಿದ ಚೆಕ್ಕನ್ನು ದುರುಪಯೋಗ ಪಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

ನಾನು 2023 ರಲ್ಲಿ ನಿಪಿ-1 ಚೆಕ್ಕು ಅಮಾನ್ಯವಾದಾಗ ಆ ಬಗ್ಗೆ ಆರೋಪಿತನಿಗೆ ನೋಟಿಸು ನೀಡಿರುವುದಿಲ್ಲ. ನಿಪಿ-1 ಚೆಕ್ಕು ದಿಃ 19.04.2023 ರಲ್ಲಿ ಅಮಾನ್ಯವಾಗಿದೆ ಎಂದರೆ ಸರಿ. ನನ್ನ ಚಿಕ್ಕಪ್ಪ ಶಶಿಧರ ರವರು ನನಗೆ ಹಣ ನೀಡಿದ ಸಂಬಂಧ ಅವರನ್ನು ವಿಚಾರಣೆಗೆ ಒಳಪಡಿಸಲು ತೊಂದರೆ ಇಲ್ಲ. ಹಾಲಿನ ಮಾರಾಟ ಮೂಲಕ ಹಣ ಪಡೆದಿದ್ದೆ ಎಂದು ಹೇಳಿದ್ದು, ಆ ಬಗ್ಗೆ ಬ್ಯಾಂಕಿನ ದಾಖಲೆಗಳನ್ನು ಹಾಜರುಪಡಿಸಲು ತೊಂದರೆ ಇಲ್ಲ. ದಿಃ 15.02.2024 ರಿಂದ 19.02.2024 ರವರೆಗಿನ ನನ್ನ ಬ್ಯಾಂಕಿನ ಲೆಕ್ಕ ತಃಖ್ತೆಯನ್ನು ಹಾಜರುಪಡಿಸಲು ತೊಂದರೆ ಇರಲಿಲ್ಲ.

ವಿಜಯ ಕುಮಾರ್ ಮತ್ತು ಮಂಜುನಾಥ ರವರು ನನ್ನ ಖಾತೆಗೆ ಯಾವ ದಿನಾಂಕ ಹಣ ಹಾಕಿದ್ದಾರೆ ಹೇಳಲಾಗುವುದಿಲ್ಲ. ವಿಜಯಕುಮಾರ್ ಒಂದೂವರೆ ಲಕ್ಷ ಹಾಗೂ ಮಂಜುನಾಥ ರವರು 50 ಸಾವಿರ ಹಣವನ್ನು ನನ್ನ ಖಾತೆಗೆ ಜಮಾ ಮಾಡಿದ್ದಾರೆ. ಸದರಿ ಹಣವು ಆರೋಪಿಯು ನನ್ನಿಂದ ಪಡೆದ ಹಣದ ತೀರುವಳಿ ಹಣವಾಗಿದೆ ಎಂದರೆ ಸರಿಯಲ್ಲ. ನಾನು ವಿಜಯ ಕುಮಾರ್ ಮತ್ತು ಮಂಜುನಾಥ ರವರೊಂದಿಗೆ ಯಾವುದೆ ಹಣದ ವ್ಯವಹಾರ ಮಾಡಿರುವುದಿಲ್ಲ. ಆರೋಪಿಯು ಬಡ್ಡಿ ಸೇರಿಸಿ 2023 ರಲ್ಲಿ ನನ್ನ ಹಣವನ್ನು ಮರು ಪಾವತಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಆದರೂ ಸಹ ಹೆಚ್ಚಿನ ಬಡ್ಡಿ ಆಸೆಗೆ ಈ

ಸುಳ್ಳು ದೂರು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ

**ಸಹಿ/-**
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ನ್ಯಾಯಾಲಯ ಕಡೂರು.